**ಎಸ್ ಸಿ ನಂ. 5024/2022**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 2

**ಪಿ ಡಬ್ಲೂಃ** 2

| | |
|---|---|
| ಸಾಕ್ಷಿಯ ಹೆಸರು - | ಶ್ರೀ ಶೈಲ |
| ತಂದೆಯ ಹೆಸರು - | ನಿಂಗಪ್ಪ |
| ವಯಸ್ಸು - | 38 ವರ್ಷ |
| ಉದ್ಯೋಗ - | ರೈತ |
| ವಾಸಸ್ಥಳ - | ವಟ್ಟಮ್ಮನ ಹಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕಃ** 29-05-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಪಿ. ಪಿ. ಅವರಿಂದ**

ಆರೋಪಿತರು ನನಗೆ ಗೊತ್ತು. ಚಾಸಾ -1 ನನ್ನ ತಮ್ಮ. 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ -1 ರವರು ರಸ್ತೆಯಲ್ಲಿ ಹೋಗುತ್ತಿರುವಾಗ ಮೋಟಾರ್ ಸೈಕಲ್ ನಿಂದ ಬಿದ್ದು ಪೆಟ್ಟು ಮಾಡಿಕೊಂಡಿದ್ದೇವು. ಆ ಸಮಯದಲ್ಲಿ ನಮಗೂ ಹಾಗೂ ಆರೋಪಿತರಿಗೂ ಆಸ್ತಿಯ ವಿಚಾರವಾಗಿ ಮನಸ್ತಾಪಗಳಿದ್ದು, ನಮಗಾಗದವರು ಖಾಲಿ ಹಾಳೆಗಳಿಗೆ ನಮ್ಮ ಸಹಿ ಪಡೆದು ದೂರು ಹಾಗೂ ಪ್ರತಿದೂರುಗಳನ್ನು ದಾಖಲಿಸಿದ್ದರು. ಆರೋಪಿತರು ನಮ್ಮ ಮೇಲೆ ಬಡಿಗೆಯಿಂದಾಗಲಿ, ಮೋಟಾರ್ ಸೈಕಲ್ ಚಾವಿಯಿಂದಾಗಲಿ, ಹಲ್ಲೆ ಮಾಡಿರುವುದಿಲ್ಲ. ನನಗೆ ತೋರಿಸಿದ ಬಡಿಗೆ, ಮೋಟಾರ್ ಸೈಕಲ್ ಚಾವಿ ಹಾಗೂ ಶರ್ಟ ನಾನು ನೋಡಿರುವುದಿಲ್ಲ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಎಸ್ ಸಿ ನಂ. 5024/2022**

**ಪಾಟೀ ಸವಾಲುಃ ಮಾನ್ಯ ಪಿ ಪಿ ಅವರಿಂದ**

ದಿಃ 24-08-2020 ರಂದು ಬೆಳಿಗ್ಗೆ 09.30 ಕ್ಕೆ ಆಸ್ತಿಯನ್ನು ಅಳತೆ ಮಾಡುವ ವಿಚಾರವಾಗಿ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದು, ಬಟ್ಟೆ ಹರಿದು, ನನಗೆ ಹಾಗೂ ಚಾಸಾ -1 ರವರಿಗೆ ಬಡಿಗೆ, ಮೋಟಾರ್ ಸೈಕಲ್ ಚಾವಿಯಿಂದ ಹಲ್ಲೆ ಮಾಡಿ, ಕೊಲೆ ಪ್ರಯತ್ನ ಮಾಡಿದ ಬಗ್ಗೆ ಪೋಲಿಸರ ಮುಂದೆ ನಾನು.............. ನೀಡಿರುತ್ತೇನೆ ಎಂದು ನಿಪಿಃ 5 ರಂತೆ ಮರು ಹೇಳಿಕೆ ನೀಡಿದ್ದರೂ ಸಹ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಸಿ ಪಿ., ವಕೀಲರಿಂದಃ ಇಲ್ಲಾ.**

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.